ವಿಶಾಖ ಎನ್.



# ಶ್ರೀದೇವಿ ಯಾಕಾಗಲಿಲ್ಲ ಶಿವಗಾಮಿ?

ಸೌಂದರ್ಯ, ಸಹಜ ಅಭಿನಯ ಎರಡರಿಂದಲೂ ದಶಕಗಳ ಕಾಲ ಸಹೃದಯರನ್ನು ರಂಜಿಸಿ 54ನೇ ವಯಸ್ಸಿಗೇ ಮರೆಯಾದವರು ನಟಿ ಶ್ರೀದೇವಿ. ಮದುವೆಯೊಂದಕ್ಕೆ ಹೋಗಿದ್ದಾಗ ಅವರು ವಿದೇಶದಲ್ಲಿ ಹಠಾತ್ತನೆ ಮೃತಪಟ್ಟ ನಂತರ ಅನೇಕ ವದಂತಿಗಳು ಹರಡಿ, ಆಮೇಲೆ ತಣ್ಣಗಾಗಿದ್ದವು. ಈಗ ಅವರು 'ಬಾಹುಬಲಿ' ತೆಲುಗು ಸಿನಿಮಾದ ಶಿವಗಾಮಿ ಪಾತ್ರದಲ್ಲಿ ನಟಿಸಬೇಕಿತ್ತು... ಆದರೆ, ಅದು ಯಾಕೆ ಸಾಧ್ಯವಾಗಲಿಲ್ಲ ಎನ್ನುವ ವಿಷಯದ ಚರ್ಚೆ ಕಾವು ಪಡೆದುಕೊಂಡಿದೆ.

'ಗೇಮ್ ಚೇಂಜರ್ಸ್' ಎನ್ನುವ ಯೂಟ್ಯೂಬ್ ಚಾನಲ್‌ಗೆ ನೀಡಿದ ಸಂದರ್ಶನದಲ್ಲಿ ಶ್ರೀದೇವಿ ಪತಿಯೂ ಆಗಿರುವ ನಿರ್ಮಾಪಕ ಬೋನಿ ಕಪೂರ್ 'ಬಾಹುಬಲಿ' ಸಿನಿಮಾ ವಿಷಯದಲ್ಲಿ ಏನು ನಡೆದಿತ್ತು ಎನ್ನುವುದನ್ನು ಹೇಳಿದ್ದಾರೆ.

ಆರ್ಕಾ ಮೀಡಿಯಾ ವರ್ಕ್ಸ್ ನಿರ್ಮಾಣ ಸಂಸ್ಥೆಯ ಶೋಬು ಯಾರ್ಲಗಡ್ಡ ಶ್ರೀದೇವಿ ವೃತ್ತಿಪರತೆ ಕಳೆದುಕೊಂಡಿದ್ದಾರೆ. ಅದೇ ಕಾರಣಕ್ಕೆ ಅವರನ್ನು ಶಿವಗಾಮಿ ಪಾತ್ರದಿಂದ ಹೊರಗಿಡಲಾಯಿತು ಎಂದು ಈ ಹಿಂದೆ ಹೇಳಿದ್ದರು. ನಿರ್ದೇಶಕ ರಾಜಮೌಳಿ ಅವರೇ ಮೊದಲಿಗೆ ಶ್ರೀದೇವಿ ಹೆಸರನ್ನು ಶಿವಗಾಮಿ ಪಾತ್ರಕ್ಕೆ ಸೂಚಿಸಿದ್ದರು. ಆ ಪಾತ್ರದ ಸ್ವರೂಪವನ್ನು ನಟಿಗೆ ವಿವರಿಸಿದ್ದ ಅವರು, ಕಾಲ್‌ಶೀಟ್‌ಗಾಗಿ ಕಾಯುತ್ತಿದ್ದರು. ಆದರೆ, ನಿರ್ಮಾಪಕರು ಮಾತುಕತೆ ನಡೆಸಿದ ಮೇಲೆ ಆ ಪಾತ್ರಕ್ಕೆ ಶ್ರೀದೇವಿ ಬೇಡ ಎಂದಿದ್ದು ಮಾತ್ರ ಹೊರಬಂದಿತ್ತು.

ಶ್ರೀದೇವಿ ಸುದೀರ್ಘಾವಧಿ ನಟಿಸಿದ್ದ ವೃತ್ತಿಪರ ನಟಿ. ಅವರ ಬದ್ಧತೆಯ ಬಗ್ಗೆ ಶೋಬು ಯಾರ್ಲಗಡ್ಡ ಇಲ್ಲಸಲ್ಲದ್ದನ್ನು ಹೇಳಿದ್ದರು. ನಡೆದ ಸಂಗತಿ ಬೇರೆಯದೇ ಆಗಿತ್ತು. 2012ರಲ್ಲಿ 'ಇಂಗ್ಲಿಷ್ ವಿಂಗ್ಲಿಷ್' ಸಿನಿಮಾದಲ್ಲಿ ಶ್ರೀದೇವಿ ನಟಿಸಿದ್ದರು. ಅದು ಗಲ್ಲಾಪೆಟ್ಟಿಗೆಯಲ್ಲಿ ಯಶಸ್ಸು ಗಳಿಸಿದ ಚಿತ್ರವೆಂದಾಗಿದ್ದೇ ಮತ್ತೆ ಈ ನಟಿಗೆ ಮಾರುಕಟ್ಟೆ ಕುದುರಿದೆ ಎಂಬ ವಿಶ್ಲೇಷಣೆ ಕೇಳಿಬಂದಿತ್ತು. 'ಬಾಹುಬಲಿ' ಸಿನಿಮಾ ನಿರ್ಮಾಪಕರಲ್ಲಿ ಶ್ರೀದೇವಿ ಒಂದು ನಿರ್ದಿಷ್ಟ ಮೊತ್ತದ ಸಂಭಾವನೆ ಕೇಳಿದರು. ಅದನ್ನು ಕೊಡಲು ಅವರು ಸಿದ್ಧರಿರಲಿಲ್ಲ. ನಿರ್ಮಾಪಕರು ಕೊಡಲು ಸಿದ್ಧವಿದ್ದ ಮೊತ್ತವು 'ಇಂಗ್ಲಿಷ್ ವಿಂಗ್ಲಿಷ್' ಚಿತ್ರಕ್ಕೆ ಶ್ರೀದೇವಿ ಪಡೆದಿದ್ದ ಸಂಭಾವನೆಗಿಂತ ಕಡಿಮೆ ಇತ್ತು. ಈ ಕಾರಣದಿಂದಾಗಿ ಆ ಪಾತ್ರದಲ್ಲಿ ಆಕೆ ನಟಿಸಲಿಲ್ಲ ಎಂದು ಬೋನಿ ಕಪೂರ್ ಸ್ಪಷ್ಟನೆ ಕೊಟ್ಟರು.

ಆ ಸಿನಿಮಾ ಅವಕಾಶ ಕೈತಪ್ಪಿದ ನಂತರವೂ ಶ್ರೀದೇವಿ ಅವರು ಹೆಚ್ಚು ಸಿನಿಮಾಗಳಲ್ಲಿ ನಟಿಸಲಿಲ್ಲ. 'ಮಾಮ್' ಎಂಬ ಹಿಂದಿ ಸಿನಿಮಾದಲ್ಲಿ ಮಾತ್ರ ಮುಖ್ಯ ಪಾತ್ರಧಾರಿಯಾಗಿ ಅಭಿನಯಿಸಿದರು. 'ಬಾಂಬೆ ಟಾಕೀಸ್' ಚಿತ್ರದಲ್ಲಿ ತಮ್ಮದೇ ಹೆಸರಿನ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ಬೋನಿ ಕಪೂರ್ ಮಾತಿಗೆ ಶೋಬು ಯಾರ್ಲಗಡ್ಡ ಯಾವ ಪ್ರತಿಕ್ರಿಯೆಯನ್ನೂ ನೀಡಿಲ್ಲ. 'ಬಾಹುಬಲಿ' ಸಿನಿಮಾದ ಶಿವಗಾಮಿ ಪಾತ್ರಕ್ಕೆ ಆಮೇಲೆ ನಟಿ ರಮ್ಯಾ ಕೃಷ್ಣ ಬಣ್ಣ ಹಚ್ಚಿದ್ದು ಗೊತ್ತೇ ಇದೆ. ■

# ಪ್ರಾಮಾಣಿಕ ಅನುಪರ್ಣಾ... ಸಹಜ ಕಂಪನ

'ಪ್ರತಿ ಮಗುವಿಗೂ ಶಾಂತಿ, ಸ್ವಾತಂತ್ರ್ಯ, ನೆಮ್ಮದಿ ಬೇಕು. ಅದಕ್ಕೆ ಪ್ಯಾಲೆಸ್ಟೀನಿ ಮಗುವೂ ಹೊರತಲ್ಲ. ನನ್ನ ಈ ಮಾತಿಗೆ ಯಾರೂ ಚಪ್ಪಾಳೆ ಹೊಡೆಯಬೇಕಿಲ್ಲ. ಈ ಹೊತ್ತಿನಲ್ಲಿ ಪ್ಯಾಲೆಸ್ಟೀನಿಯರಿಗೆ ಬೆಂಬಲವಾಗಿ ನಿಲ್ಲುವುದು ಹೊಣೆಗಾರಿಕೆ... ನನ್ನ ಈ ಮಾತಿನಿಂದಾಗಿ ನನ್ನ ದೇಶಕ್ಕೆ ಮುಜುಗರ ಉಂಟಾಗಬಹುದು. ಹಾಗಂತ ನಾನು ಈ ವಿಷಯದಲ್ಲಿ ಸುಮ್ಮನಿರಲಾರೆ...'

ಅನುಪರ್ಣಾ ರಾಯ್ ಹೀಗೆ ಹೇಳುವಾಗ ಅವರ ದನಿ ಕಂಪಿಸುತ್ತಿತ್ತು. ವೆನಿಸ್ ಅಂತರರಾಷ್ಟ್ರೀಯ ಚಿತ್ರೋತ್ಸವದ 'ಒರಿಝೊಂಟಿ' (ದಿಗಂತಗಳು) ವಿಭಾಗದಲ್ಲಿ ಶ್ರೇಷ್ಠ ಚಲನಚಿತ್ರ ನಿರ್ದೇಶಕಿ ಪ್ರಶಸ್ತಿಯನ್ನು ಈಕೆ ತಮ್ಮದಾಗಿಸಿಕೊಂಡರು. ಭಾರತದ ನಿರ್ದೇಶಕರೊಬ್ಬರಿಗೆ ಒಲಿದ ಮೊದಲ ಪ್ರಶಸ್ತಿ ಇದು. 'ಸಾಂಗ್ಸ್ ಆಫ್ ಫರ್ಗಾಟನ್ ಟ್ರೀಸ್' ಎನ್ನುವ ಚಿತ್ರಕ್ಕೆ ಈ ಪ್ರಶಸ್ತಿ ಸಂದದ್ದು.

ಪಶ್ಚಿಮ ಬಂಗಾಳದ ನಾರಾಯಣಪುರ ಹಳ್ಳಿಯವರು ಅನುಪರ್ಣಾ. ಓದು ಮುಗಿಸಿದ ನಂತರ ಕಾಲ್‌ಸೆಂಟರ್ ಒಂದರಲ್ಲಿ ಕೆಲಸ ಮಾಡಿದ ಅವರಿಗೆ ಚಿತ್ರ ತಯಾರಿಸುವ ಕನಸಿತ್ತು. 'ರನ್ ಟು ದಿ ರಿವರ್' ಸಿನಿಮಾದ ಸಹಾಯಕ ನಿರ್ದೇಶಕಿಯಾಗಿ ಪಟ್ಟುಗಳನ್ನು ಕಲಿತರು.

ಮುಂಬೈಗೆ ಬಂದ ವಲಸಿಗ ಹೆಣ್ಣುಮಗಳೊಬ್ಬಳು ಹೊಸಕಾಲದಲ್ಲಿ ಬದುಕಲು ಪಡುವ ಪಡಿಪಾಟಲುಗಳನ್ನು ನಗರ ಸಂವೇದನೆಯ ಸೂಕ್ಷ್ಮಗಳ ಸಹಿತ ಹೆಣ್ಣುಕಣ್ಣಿನಿಂದ ನಿರೂಪಿಸುವ ಚಿತ್ರಕತೆಯನ್ನು ಅವರು ಬರೆಯತೊಡಗಿದರು. ಮೂರು ವರ್ಷ ಕತೆಯನ್ನು ತಿದ್ದುತ್ತಾ ಹೋದರು. ಅನುರಾಗ್ ಕಶ್ಯಪ್, ಬಿಭಾಂಶು ರೈ, ರೋಮಿಲ್ ಮೋದಿ ಹಾಗೂ ರಂಜನ್ ಸಿಂಗ್ ಈ ಉತ್ಸಾಹಿಯ ಕನಸಿಗೆ ರೆಕ್ಕೆಪುಕ್ಕ ಹಚ್ಚಿದರು. ಸಿನಿಮಾ ನಿರ್ಮಾಣಕ್ಕೆ ಹಣ ಹೂಡಲು ಮುಂದಾದರು.

'ಚಿತ್ರೀಕರಣ ಪ್ರಾರಂಭಿಸಿದಾಗ ನಾನು 50 ದೃಶ್ಯಗಳನ್ನು ಮಾತ್ರ ಬರೆದಿದ್ದೆ. ಆದರೆ, ಅಷ್ಟು ಹೊತ್ತಿಗೆ ಆತ್ಮವಿಶ್ವಾಸ ಮೂಡಿತ್ತು. 77 ನಿಮಿಷಗಳ ಚಿತ್ರದಲ್ಲಿ ನಾನು ಏನು ಹೇಳಬೇಕು ಎಂದು ಬಯಸಿದ್ದೆನೋ ಅದನ್ನು ತರುವುದು ಸಾಧ್ಯವಾಯಿತು. ಚಿತ್ರೀಕರಣದ ನಂತರ ಉಳಿದ ದೃಶ್ಯಗಳು ಸಲೀಸಾಗಿ ಬರೆಸಿಕೊಂಡವು. ಹೆಣ್ಣುಮಕ್ಕಳ ಕುರಿತ ವಸ್ತುವಿಷಯದ ಸಿನಿಮಾ ನಿರ್ಮಾಣಕ್ಕೆ ಬೆಂಗಾವಲಾಗಿ ನಿಂತ ಎಲ್ಲರಿಗೂ ಕೃತಜ್ಞಳು. ಕಲಾಮಾಧ್ಯಮವನ್ನು ಸೂಕ್ಷ್ಮ ಸಂಗತಿಗಳನ್ನು ಹೇಳಲು ಸಮರ್ಥವಾಗಿ ಬಳಸಿಕೊಳ್ಳಬೇಕು ಎಂದು ನಂಬಿದವಳು ನಾನು' ಎಂದು ಹೇಳುವಾಗಲೂ ಅನುಪರ್ಣಾ ಅವರಲ್ಲಿ ಸಹಜ ಕಂಪನವೊಂದು ಇತ್ತು. ಅವರ ಪ್ರಾಮಾಣಿಕ ಮಾತಿಗೆ ವೆನಿಸ್ ಚಿತ್ರೋತ್ಸವದಲ್ಲಿ ನೆರೆದಿದ್ದ ದಿಗ್ಗಜರ ಕರತಾಡನದ ದೊಡ್ಡ ಸದ್ದಿನ ಸಮರ್ಥನೆಯೊಂದು ಸಿಕ್ಕಿದ್ದು ಸಾಮಾಜಿಕ ಮಾಧ್ಯಮದಲ್ಲಿ ಈಗ ಹರಿದಾಡುತ್ತಿದೆ. ■

